ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 1126/24**

ಪಿಡಬ್ಲ್ಯುಃ – 1

ಸಿಡಬ್ಲ್ಯುಃ – 1

ದಿನಾಂಕಃ 11.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ವಿಜಯ ಕುಮಾರ್ |
| ತಂದೆಯ ಹೆಸರು | – ಕೆ. ಕೆ. ಅಪ್ಪಣ್ಣ |
| ವಯಸ್ಸು | – 60 ವರ್ಷ |
| ವೃತ್ತಿ | – ಟೈಲರಿಂಗ್ ಕೆಲಸ |
| ವಾಸಸ್ಥಳ | – ಸಂಪಾಜೆ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಮಗ. ಚಾಸಾ-4 ರಿಂದ 7, 13, 14 ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು. ನಾನು ಕಲ್ಲುಗುಂಡಿ ಗ್ರಾಮದಲ್ಲಿ ಶೃಂಗಾರ್ ಟೈಲರ್ಸ್ ಹೆಸರಿನಲ್ಲಿ ಅಂಗಡಿ ನಡೆಸುತ್ತಿದ್ದೇನೆ. ನಾನು ವಾಸವಿರುವ ಮನೆ ಸಂಪಾಜೆ ಗ್ರಾಮದಲ್ಲಿ ಇದೆ. ದಿಃ 08.02.2024 ರಂದು ಬೆಳಗ್ಗೆ 10.00 ಗಂಟೆಗೆ ನಾನು ಮತ್ತು ಚಾಸಾ-2 ಸದರಿ ನನ್ನ ಟೈಲರಿಂಗ್ ಅಂಗಡಿಗೆ ಹೋದೆವು. ನಂತರ ಅದೇ ದಿನ ಬ್ಯಾಂಕಿನಲ್ಲಿ ಏನೋ ಕೆಲಸ ಇದೆ ಎಂದು ಹೇಳಿ ನಾನು ಮತ್ತು ನನ್ನ ಮಗ ಬೆಃ 11.00 ಗಂಟೆಗೆ ಸುಳ್ಯಗೆ ಹೋದೆವು. ವಾಪಾಸ್ಸು ಕಲ್ಲುಗುಂಡಿಗೆ ಬರುವಷ್ಟರಲ್ಲಿ ಸಂಜೆ 6.00 ಗಂಟೆ ಆಗಿತ್ತು. ನಾನು, ಚಾಸಾ-2 ಅಂಗಡಿಯನ್ನು ಬಂದ್ ಮಾಡಿ ಸಂಜೆ 7-30 ಗಂಟೆಗೆ ಅಲ್ಲಿಂದ ಹೊರಟು ಮನೆಗೆ ಬಂದೆವು. ನಮ್ಮ ಮನೆಗೆ ಬಂದು ನೋಡಿದಾಗ, ನಮ್ಮ ಮನೆಯ ಮುಂಬಾಗಿಲು ಅರ್ಧ ತೆಗೆದಿತ್ತು, ನಾನು ಮತ್ತು ಚಾಸಾ-2 ಒಳಗೆ ಹೋಗಿ ನೋಡಿದಾಗ ನಮ್ಮ ಮನೆಯಲ್ಲಿದ್ದ ಗಾಡ್ರೆಜ್ ಬೀರು ಬಾಗಿಲು ತೆರೆದಿತ್ತು, ಬಟ್ಟೆಗಳು ಚೆಲ್ಲಾಪಿಲ್ಲಿ ಆಗಿದ್ದವು. ನಮ್ಮ ಮನೆಯಲ್ಲಿದ್ದ ಮರದ ಡ್ರಾಯರ್ ಕೂಡ ತೆಗೆದಿತ್ತು. ನಮ್ಮ ಮನೆಯ ಮುಂಬಾಗಿಲಿನ ಬೀಗ ಒಡೆದಿತ್ತು.

ನಮ್ಮ ಪಕ್ಕದ ಮನೆಯವರಾದ ಸೀತಾರಾಮ ಅವರ ಹೆಂಡತಿಯನ್ನು ವಿಚಾರಿಸಿದಾಗ ಅವರು ತಮಗೇನೂ ಗೊತ್ತಿಲ್ಲ ಎಂದು ತಿಳಿಸಿದರು. ಕೂಡಲೇ ನಾನು ಹೋಗಿ ಪೊಲೀಸ್ ಠಾಣೆಗೆ ವಿಚಾರ ತಿಳಿಸಿ ದೂರು ನೀಡಿರುತ್ತೇನೆ. ನನ್ನ ಮನೆಯ ಬೀಗ ಒಡೆದು ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ನನಗೆ ತಿಳಿಯಿತು. ನನ್ನ ಗಾದ್ರೆಜ್ ಬೀರುವಿನಲ್ಲಿ ಇಟ್ಟಿದ್ದ ನಗದು ರೂ.20,000/- ಹಣ ಹಾಗೂ ಮರದ ಡ್ರಾಯರ್ ನಲ್ಲಿದ್ದ ಅಂದಾಜು 24 ಗ್ರಾಂ ನ ಪೆಂಡೆಂಟ್ ಇರುವ ಒಂದು ಚಿನ್ನದ ಚೈನ್, ಅಂದಾಜು 8 ಗ್ರಾಂನ ಚಿನ್ನದ ಒಂದು ಬಳೆ, 5 ಗ್ರಾಂನ ಚಿನ್ನದ ಉಂಗುರ, 3 ಗ್ರಾಂನ ಎರಡು ಚಿನ್ನದ ಉಂಗುರಗಳು, 2 ಗ್ರಾಂನ ಚಿನ್ನದ ತಾಳಿ ಇಷ್ಟು ಕಳುವಾಗಿದ್ದವು. ನಮ್ಮ ಮನೆಯನ್ನು ಪರಿಶೀಲಿಸಿದಾಗ ಅಲ್ಲೇ ಕೆಳಗೆ ನೆಲದಲ್ಲಿ ಸುಮಾರು 7 ಗ್ರಾಂನ 2 ಚಿನ್ನದ ಉಂಗುರ ಹಾಗೂ ಒಂದು ಚಿನ್ನದ ತಾಳಿ ಸ್ಥಳದಲ್ಲೇ ಸಿಕ್ಕಿತು. ಇನ್ನುಳಿದ ಮೇಲೆ ಹೇಳಿದ ಚಿನ್ನದ ಆಭರಣ ಹಾಗೂ ನಗದು ನಮ್ಮ ಮನೆಯಲ್ಲಿ ಕಳುವಾಗಿರುತ್ತದೆ. ನಾನು ಈ ಬಾಪ್ತು ದೂರು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ09.02.2024ರ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ದಿಃ 09.02.2024 ರಂದು ಪೊಲೀಸರು ನಮ್ಮ ಮನೆಯಲ್ಲಿ ನಿಪಿ-2 ರಂತೆ ಮಹಜರು ಮಾಡಿರುತ್ತಾರೆ, ಆಗ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ಮಾಡುವ ಕಾಲಕ್ಕೆ ಚಾಸಾ-13, ಚಾಸಾ-4, 5, 14 ಕೂಡ ಇದ್ದರು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ16.02.2024ರ ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಿಃ 06.02.2024 ರಂದು ಪೊಲೀಸರು ಆರೋಪಿಗಳನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ನಿಪಿ-3 ರಂತೆ ಮಹಜರು ಕ್ರಮ ಮಾಡಿರುತ್ತಾರೆ. ಆಗ ನಾನು ನಿಪಿ-3 ಕ್ಕೆ ಸಹಿ ಮಾಡಿರುತ್ತೇನೆ. ಆಗ ಚಾಸಾ-13, 14 ಕೂಡ ಇದ್ದರು, ಅವರು ಕೂಡ ಮಹಜರಿಗೆ ಸಹಿ ಮಾಡಿರುತ್ತಾರೆ. ಆರೋಪಿಗಳು ಒಡೆದು ಹಾಕಿದ್ದ

ಒಂದು ಬೀಗವನ್ನು, ಆರೋಪಿಗಳು ಅವರು ಕೃತ್ಯಕ್ಕೆ ಬಳಸಿದ್ದ ಸ್ಕ್ರೂ ಡ್ರೈವರ್ ಹಾಗೂ ಸುತ್ತಿಗೆಯನ್ನು ತೋರಿಸಿದ ಮೇರೆಗೆ ಪೊಲೀಸರು ನಮ್ಮ ಸಮಕ್ಷಮ ಅವುಗಳನ್ನು ಅಮಾನತು ಮಾಡಿಕೊಂಡರು. ಸದರಿ ಬೀಗ, ಸ್ಕ್ರೂ ಡ್ರೈವರ್ ಹಾಗೂ ಸುತ್ತಿಗೆಯನ್ನು ನೋಡಿದರೆ ಗುರುತಿಸುತ್ತೇನೆ, ಬೀಗದ ಒಂದು ತುಂಡು ಅಲ್ಲೇ ಸ್ಥಳದಲ್ಲಿ ಬಿದ್ದಿದ್ದು, ಅದನ್ನು ಪೊಲೀಸರು ಅಮಾನತು ಪಡಿಸಿಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು. ಮಾ.1 ರಿಂದ 4 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದಿಃ27.02.2024ರ ಸ್ವತ್ತು ಪ್ರತ್ಯೇಕ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಪೊಲೀಸರು ಠಾಣೆಯಲ್ಲಿ ನನ್ನನ್ನು ಕರೆಸಿ ಬೇರೆ ಪ್ರಕರಣದಲ್ಲಿ ಆರೋಪಿಗಳಿಂದ ಅಮಾನತ್ತು ಪಡಿಸಿಕೊಂಡಿದ್ದ ಚಿನ್ನದ ಆಭರಣಗಳನ್ನು ತೋರಿಸಿ ಈ ಪ್ರಕರಣದಲ್ಲಿ ಆರೋಪಿಗಳು ನಮ್ಮ ಮನೆಯಿಂದ ಕದ್ದಿದ್ದ ಚಿನ್ನಾಭರಣಗಳನ್ನು ತೋರಿಸಿದ್ದು, ನಾನು 17 ಗ್ರಾಂ 460 ಮಿಲಿ ಗ್ರಾಂ ತೂಕದ ಒಂದು ಚಿನ್ನದ ಗುಂಡುಗಳಿರುವ ಚಿನಬ್ಬದ ಕರಿಮಣಿ ಸರ, 7 ಗ್ರಾಂ 360 ಮಿಲಿ ಗ್ರಾಂ ತೂಕದ ಒಂದು ಚಿನ್ನದ ಕೊಕ್ಕೆ ತಾತಿ(ಪೆಂಡೆಂಟ್), 3 ಗ್ರಾಂ 600 ಮಿ ಲಿ ಗ್ರಾಂ ತೂಕ ಒಂದು ಜೊತೆ ಕಿವಿಯೋಲೆ ಗಳನ್ನು ಅದನ್ನು ಗುರುತಿಸಿದ ಮೇರೆಗೆ ಪೊಲೀಸರು ನನ್ನ ಹಾಗೂ ಚಾಸಾ-9 ಸುರೇಶ್ ಹಾಗೂ ಚಾಸಾ-6 ಕೇಶವರವರ ಸಮಕ್ಷಮ ಅಮಾನತು ಪಡಿಸಿಕೊಂಡರು. ಆಗ ನಾನು ನಿಪಿ-4ಕ್ಕೆ ಸಹಿ ಮಾಡಿರುತ್ತೇನೆ. ಸ್ಥಳ ಮಹಜರು ಮಾಡುವ ಕಾಲದಲ್ಲಿ ಹಾಗೂ ಚಿನ್ನವನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲದಲ್ಲಿ ಮತ್ತು ನನಗೆ ಚಿನ್ನವನ್ನು ಬಿಡುಗಡೆ ಮಾಡುವಾಗ, ಆರೋಪಿಗಳು ಸುತ್ತಿಗೆ ಮತ್ತು ಸ್ಕ್ರೂ ಡ್ರೈವರನ್ನು ತೋರಿಸಿ ವಶಪಡಿಸಿಕೊಳ್ಳುವಾಗ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-5 ರಿಂದ ನಿಪಿ-14 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಒಟ್ಟು ಸುಮಾರು ರೂ.2ಲಕ್ಷಕ್ಕೂ ಅಧಿಕ ಬೆಲೆ ಬಾಳುವ ಚಿನ್ನಾಭರಣಗಳು ಕಳುವಾಗಿದ್ದವು. ಆರೋಪಿಗಳೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂದು ಪೊಲೀಸರು ನನಗೆ ಆರೋಪಿಗಳನ್ನು ತೋರಿಸಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಸಿ ಎ ಪಿ ರವರಿಂದಃ–

ಕೃತ್ಯ ಆಗಿದ್ದ ದಿನವೇ ನಾನು ಪೊಲೀಸ್ ಠಾಣೆಗೆ ಹೋಗಿ ನಿಪಿ–1 ರಂತೆ ದೂರು ನೀಡಿರುತ್ತೇನೆ. ನಿಪಿ–1 ದೂರನ್ನು ನನ್ನ ಸ್ನೇಹಿತರಾದ ಕುಮಾರ್ ಚಿಕ್ಕರ್ ಬರೆದಿರುತ್ತಾರೆ. ನಿಪಿ–1 ರಲ್ಲಿ ಸದರಿ ಕುಮಾರಿ ಚಿಕ್ಕರ್ ರವರ ಸಹಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ–1 ದೂರಿನಲ್ಲಿ ನೀವು ನಮೂದಿಸಿರುವ ಚಿನ್ನಾಭರಣಗಳ ಡಿಜೈನ್ ನ ವಿವರಣೆ ಬರೆದಿಲ್ಲ ಎಂದರೆ ಸಾಕ್ಷಿಯು ನನ್ನ ಮನೆಯಲ್ಲಿ ಚಿನ್ನ ಕಳುವಾಗಿದ್ದ ಗಾಬರಿಯಿಂದ ನಾನು ಅದರ ಆಕಾರದ ಬಗ್ಗೆ ಬರೆದಿಲ್ಲ ಎನ್ನುತ್ತಾರೆ. ಪೊಲೀಸರು ಮಹಜರು ಮಾಡಲು ಬಂದಾಗ ಚಿನ್ನಾಭರಣಗಳ ಡಿಜೈನ್ ಬಗ್ಗೆ ಪೊಲೀಸರಿಗೆ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಡಿಜೈನ್ ಬಗ್ಗೆ ಹೇಳಿಲ್ಲ ಎನ್ನುತ್ತಾರೆ. ಹಾಗಾದರೆ ನೀವು ನ್ಯಾಯಾಲಯದಿಂದ ಚಿನ್ನಾಭರಣಗಳನ್ನು ಬಿಡಿಸಿಕೊಳ್ಳುವಾಗ ಯಾವ ರೀತಿ ಅದನ್ನು ಗುರುತಿಸಿ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನಾವು ಪ್ರತಿದಿನ ಸದರಿ ಚಿನ್ನಾಭರಣಗಳನ್ನು ಉಪಯೋಗಿಸುತ್ತಿದ್ದ ಕಾರಣ ನನ್ನ ಚಿನ್ನಾಭರಣ ನನಗೆ ಚೆನ್ನಾಗಿ ಗೊತ್ತಿತ್ತು, ಆ ರೀತಿ ನಾನು ಗುರುತಿಸಿ ಬಿಡಿಸಿಕೊಂಡಿರುತ್ತೇನೆ. ನಿಪಿ–4 ರಲ್ಲಿ ಸದರಿ ಚಿನ್ನಾಭರಣಗಳ ಡಿಜೈನ್ ಬಗ್ಗೆ ನಮೂದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಮನೆಯ ಹಾಲ್ ನಲ್ಲಿ ಲೈಟ್ ಬ್ರೌನ್ ಬಣ್ಣದ ಡ್ರಾಯರ್ ಇತ್ತು. ಸದರಿ ಡ್ರಾಯರ್ ಬಗ್ಗೆ ನಿಪಿ–2 ರಲ್ಲಿ ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ–2 ರಲ್ಲಿ ಸದರಿ ಡ್ರಾಯರ್ ನ ಬಣ್ಣದ ಬಗ್ಗೆ ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ನಮ್ಮ ಮನೆಯಲ್ಲಿ ಕಳ್ಳತನ ಆಗಿರುವ ಬಗ್ಗೆ ಗಾಬರಿಯಲ್ಲಿ ಇದ್ದೆನು ಆದ್ದರಿಂದ ಆ ಬಗ್ಗೆ ನಮೂದು ಮಾಡಿದ್ದಾರೋ ಇಲ್ಲವೋ ನಾನು ನೋಡಲಿಲ್ಲ ಎನ್ನುತ್ತಾರೆ. ನಿಪಿ–2 ಮಹಜರು ಮಾಡುವ ಕಾಲಕ್ಕೆ ಶ್ವಾನ ದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ಬಂದಿದ್ದರು. ಶ್ವಾನ ದಳ ಮತ್ತು ಬೆರಳಚ್ಚು ತಜ್ಞರು ಬರುವ ಮೊದಲೇ ನಾನು ಗಾದ್ರೆಜನ್ನು ತೆರೆದು ನೋಡಿದ್ದೆ ಎಂದರೆ ಸರಿಯಲ್ಲ. ನನ್ನ ಮನೆಯ ಮೂರು ಕೋಣೆಗಳಲ್ಲಿ ಕೂ ಡ ಪೊಲೀಸರು ಸ್ಥಳ ಪರಿಶೀಲನೆ ಮಾಡಿ ಚೆಲ್ಲಾಪಿಲ್ಲಿಯಾಗಿದ್ದ ಬಟ್ಟೆಯನ್ನು ನೋಡಿ ಒಪನ್ ಮಾಡಿದ ಡ್ರಾಯರ್ ಮತ್ತು ಗಾದ್ರೆಜ್ ಬೀರುವನ್ನು ನೋಡಿ ಪರಿಶೀಲಿಸಿ ನಿಪಿ–2 ರಂತೆ ಮಹಜರು ಮಾಡಿರುತ್ತಾರೆ. ನಿಪಿ–2 ರ ಪಂಚರಿಗೆ ಪೊಲೀಸರು ನನ್ನ ಸಮಕ್ಷಮ ನೋಟಿಸ್ ನೀಡಿಲ್ಲ. ನ್ಯಾಯಾಲಯದ ಮುಂದಿರುವ ಸುತ್ತಿಗೆಗೆ ಕೆಂಪು ಬಣ್ಣ ಬಳಿದಿರುತ್ತದೆ ಹಾಗೂ ಸ್ಕ್ರೂ ಡ್ರೈವರ್ ಗೆ ಕೆಂಪು ಹಿಡಿ ಇರುತ್ತದೆ ಈ ಬಗ್ಗೆ ನಿಪಿ–3 ರಲ್ಲಿ ನಮೂದು ಇದೆಯಾ ಎಂದರೆ ನನಗೆ ಗೊತ್ತಿಲ್ಲ. ನಿಪಿ–3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಸುತ್ತಿಗೆ ಹಾಗೂ ಸ್ಕ್ರೂ ಡ್ರೈವರ್ ಎಲ್ಲಿತ್ತು ಎಂದರೆ ಸಾಕ್ಷಿಯು ನನ್ನ ಮುಂಬಾಗಿಲಿನಿಂದ 20 ಮೀಟರ್ ದೂರದಲ್ಲಿ ಸದರಿ ಸ್ಕ್ರೂ ಡ್ರೈವರ್ ಮತ್ತು ಸುತ್ತಿಗೆ ಇತ್ತು. ನಿಪಿ–4 ರಲ್ಲಿ ನಮಗೆ

ಸೇರಿದ್ದು ಎನ್ನಲಾದ ಚಿನ್ನಾಭರಣಗಳ ಡಿಜೈನ್ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ–4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ ಅಂದಾಜು 1 ರಿಂದ 2 ಸಹಿಗಳನ್ನು ಮಾಡಿರುತ್ತೇನೆ. ನಿಪಿ–2 ಮತ್ತು 3 ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–4 ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನಿಪಿ–5 ರಿಂದ 14 ಫೋಟೋಗಳನ್ನು ತೆಗೆದಿರುತ್ತಾರೆ ಆದರೆ ಅವುಗಳನ್ನು ಯಾರ ಮೊಬೈಲ್ ನಿಂದ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮನೆಯಲ್ಲಿ ಸದರಿ ದಿನಾಂಕದಂದು ಯಾವುದೇ ಕಳ್ಳತನ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ–1, 2 ದಾಖಲೆಗಳಲ್ಲಿ ಚಿನ್ನಾಭರಣಗಳ ವಿವರಣೆ ಕೊಡದೆ ಇರುವ ಕಾರಣ ನನಗೆ ಚಿನ್ನಾಭರಣಗಳನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಮನೆಯಲ್ಲಿ ಕಳ್ಳತನ ಮಾಡಿಲ್ಲ, ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಕುಮಾರ್ ಚಿತ್ತರ್ ರವರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ತುಂಬಾ ಗಾಬರಿಯಲ್ಲಿ ಇದ್ದೆ. ಮು. ಮಾ.1 ರಿಂದ 3 ಸಾಮಾನ್ಯವಾಗಿ ಕಲ್ಲುಗುಂಡಿ ಗ್ರಾಮದಲ್ಲಿ ಸಿಗುತ್ತದೆ ಎಂದರೆ ಸರಿ. ಪೊಲೀಸರ ಮಾತು ಕೇಳಿ ನಾನು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.